# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1271** |
| **ಸದಸ್ಯರ ಹೆಸರು** | : | **ಶ್ರೀ ಅರವಿಂದ ಕುಮಾರ್ ಅರಳಿ**<br>**(ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **29.12.2022** |
| **ಉತ್ತರಿಸುವ ಸಚಿವರು** | : | **ಜಲಸಂಪನ್ಮೂಲ ಸಚಿವರು** |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ ಜಿಲ್ಲೆಯಲ್ಲಿ ಗೋದಾವರಿ ಬೆಸನ್ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬೆಸನ್ ಅಡಿಯಲ್ಲಿ ಬರುವ ನೀರಾವರಿ ಯೋಜನೆ ಮತ್ತು ಜಲಾಶಯಗಳಾವುವು;</td><td rowspan="3">ಗೋದಾವರಿ ಜಲ ವಿವಾದ ನ್ಯಾಯಾಧಿಕರಣ (ಬಚಾವತ್ ನ್ಯಾಯಾಧಿಕರಣ)ದ ತೀರ್ಪಿನಂತೆ ಕಣಿವೆ ರಾಜ್ಯಗಳು ಪರಸ್ಪರ ಒಪ್ಪಂದ ಮೂಲಕ ಗೋದಾವರಿ ಕಣಿವೆಯಲ್ಲಿ ರಾಜ್ಯಕ್ಕೆ ಯೋಜನಾವಾರು 22.37 ಟಿಎಂಸಿ ನೀರು ಹಂಚಿಕೆಯಾಗಿರುತ್ತದೆ. ಸದರಿ ಹಂಚಿಕೆಯಡಿ ಭಾರಿ ಮತ್ತು ಮಧ್ಯಮ ನೀರಾವರಿ ಅಡಿಯಲ್ಲಿ ಕೈಗೊಂಡಿರುವ ಯೋಜನೆಗಳು ಮತ್ತು ನೀರಿನ ಹಂಚಿಕೆ ವಿವರಗಳು ಈ ಕೆಳಕಂಡಂತಿವೆ:<br><br>
<table>
<tr><th>ಕ್ರ.<br>ಸಂ.</th><th>ಯೋಜನೆ</th><th>ನೀರಿನ ಹಂಚಿಕೆ (ಟಿಎಂಸಿ)</th></tr>
<tr><td>1.</td><td>ಕಾರಂಜಾ ಯೋಜನೆ</td><td>9.30</td></tr>
<tr><td>2.</td><td>ಚುಳಕಿನಾಲಾ</td><td>1.17</td></tr>
<tr><td>3.</td><td>ಸರಣಿ ಬ್ಯಾರೇಜುಗಳು</td><td></td></tr>
<tr><td>i)</td><td>ಚಂದಾಪುರ</td><td>0.78</td></tr>
<tr><td>ii)</td><td>ಹಾಲಹಳ್ಳಿ</td><td>2.46</td></tr>
<tr><td>iii)</td><td>ಮಾಣಿಕೇಶ್ವರ</td><td>0.78</td></tr>
<tr><td>iv)</td><td>ಜೀರಗಿಹಾಳ</td><td>0.78</td></tr>
</table>
ಮೇಲ್ಕಂಡ ಯೋಜನೆಗಳನ್ನು ಹೊರತುಪಡಿಸಿ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರಿನ ಪ್ರಮಾಣದಲ್ಲಿನ ಉಳಿಕೆ ನೀರನ್ನು ಸಣ್ಣ ನೀರಾವರಿ ಯೋಜನೆಗಳಲ್ಲಿ ಬಳಸಲಾಗುತ್ತಿದೆ.<br><br>ಮುಂದುವರೆದು, ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ 4 ಸರಣಿ ಬ್ಯಾರೇಜುಗಳಿಂದ ನೀರನ್ನು ರೈತರು ಪಂಪ್‌ಸೆಟ್ ಮೂಲಕ ನೀರಾವರಿಗಾಗಿ ಉಪಯೋಗಿಸುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ, ಮತ್ತು ಕಾರಂಜಾ ಮತ್ತು ಚುಳಕಿನಾಲಾ ಕಣಿವೆಯಲ್ಲಿ ನೀರಿನ ಲಭ್ಯತೆ ಕಡಿಮೆಯಾಗಿರುವ ಕಾರಣ, ಈ ಕೆಳಕಂಡ</td></tr>
<tr><td>ಆ)</td><td>ಈ ಜಲಾಶಯ ಹಾಗೂ ಯೋಜನೆಗಳಲ್ಲಿ ಎಷ್ಟು ಟಿ.ಎಂ.ಸಿ. ನೀರನ್ನು ಬಳಕೆ ಮಾಡಲಾಗುತ್ತಿದೆ; ಎಷ್ಟು ನೀರನ್ನು ತೆಲಂಗಾಣಕ್ಕೆ ಹರಿದು ಬಿಡಲಾಗುತ್ತಿದೆ;</td></tr>
<tr><td>ಇ)</td><td>ಜಿಲ್ಲೆಗೆ ಉಪಯೋಗಿಸ ಬೇಕಾಗಿರುವ ಸುಮಾರು ಟಿ.ಎಂ.ಸಿ. ನೀರು ತೆಲಂಗಾಣ ರಾಜ್ಯಕ್ಕೆ ಹರಿದು ಹೋಗುತ್ತಿರುವುದರಿಂದ ಆ ನೀರನ್ನು ಬಳಕೆ ಮಾಡಲು ಸರ್ಕಾರ ಯಾವ ಯೋಜನೆ ಹಮ್ಮಿಕೊಳ್ಳಲಾಗಿದೆ?</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಯೋಜನೆಗಳನ್ನು ರೂ.306.91 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಪ್ರಗತಿಯಲ್ಲಿದೆ:<br>1. ಕೊಂಗಳಿ ಬ್ಯಾರೇಜಿನಿಂದ 1.12 ಟಿಎಂಸಿ ನೀರನ್ನು ಎತ್ತಿ ಬಸವಕಲ್ಯಾಣ ತಾಲ್ಲೂಕಿನ 15 ಕೆರೆಗಳು ಹಾಗೂ ಚುಳಕಿನಾಲಾ ಜಲಾಶಯ ತುಂಬಿಸುವ ಕಾಮಗಾರಿ<br>2. ಮಾಣಿಕೇಶ್ವರ ಬ್ಯಾರೇಜಿನಿಂದ 1.119 ಟಿಎಂಸಿ ನೀರನ್ನು ಒದಗಿಸಿ ಕಾರಂಜಾ ಬಲದಂಡೆ ಕಿ.ಮೀ.60 ಅಚ್ಚುಕಟ್ಟು (8077 ಹೆ.) ಸ್ಥಿರೀಕರಿಸುವ (Stabilisation) ಕಾಮಗಾರಿ.<br>3. ಹಾಲಹಳ್ಳಿ ಬ್ಯಾರೇಜ್‌ನಿಂದ 1.050 ಟಿಎಂಸಿ ನೀರನ್ನು ಒದಗಿಸಿ ಕಾರಂಜಾ ಬಲದಂಡೆ ಕಿ.ಮೀ.90 ಅಚ್ಚುಕಟ್ಟು (1050 ಹೆ.) ಸ್ಥಿರೀಕರಿಸುವ (Stabilisation) ಕಾಮಗಾರಿ.<br>ಬಚಾವತ್ ನ್ಯಾಯಾಧಿಕರಣದ ತೀರ್ಪಿನನ್ವಯ ಗೋದಾವರಿ ಕಣಿವೆಯಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿರುವ 22.37 ಟಿಎಂಸಿ ನೀರಿನ ಪ್ರಮಾಣವನ್ನು ಬಳಸಲು ಅವಕಾಶವಿದ್ದು, ಅದರಂತೆ, ಈಗಾಗಲೇ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. ಸದರಿ ಪ್ರಮಾಣದಲ್ಲಿ ಉಳಿಕೆ ಆಗುವ ನೀರನ್ನು ಬಳಸಲು, ತಾಂತ್ರಿಕ ಶಕ್ಯತೆ ಹಾಗೂ ಅನುದಾನ ಲಭ್ಯತೆಯನ್ನು ಪರಿಗಣಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು. |

ಜಸಂಇ 221 ಎಂಎಲ್ಎ 2022

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು